**ಪಾಠ–11** **ಮಾರ್ಚ್ 5–11**

# ಯೇಸು ನಮ್ಮಲ್ಲಿ ನಂಬಿಕೆ ಹುಟ್ಟಿಸುತ್ತಾನೆ ಮತ್ತು ಪೂರೈಸುತ್ತಾನೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಇಬ್ರಿಯ 10:35–39, ರೋಮ 1:17, ಇಬ್ರಿಯ 11, ಯೆಹೋಶುವ 2:9–11, ಇಬ್ರಿಯ 12:1–3.

**ಸ್ಮರಣವಾಕ್ಯ : "ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯ ಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ"** (ಇಬ್ರಿಯ 12:2).

ಇಬ್ರಿಯ ಪತ್ರಿಕೆಯಲ್ಲಿ 11 ಮತ್ತು 12ನೇ ಅಧ್ಯಾಯಗಳು ಬಹುಶಃ ಅತ್ಯಂತ ಪ್ರೀತಿಪಾತ್ರವಾದವುಗಳಾಗಿವೆ. ಈ ಅಧ್ಯಾಯಗಳು ನಮ್ಮ ಕ್ರೈಸ್ತೀಯ ಜೀವಿತವನ್ನು ನಾವೆಲ್ಲರೂ ನಂಬಿಗಸ್ತರಾಗಿ ಜೀವಿಸಿ ಪ್ರತಿಫಲವನ್ನು ಪಡೆಯುವ ಓಟದಲ್ಲಿ ಭಾಗವಹಿಸುವರಾಗಿದ್ದೇವೆಯೆಂದು ವರ್ಣಿಸುತ್ತವೆ. ಮತ್ತು ವಿಮೋಚನೆಯ ಕಥೆಯನ್ನು ನಂಬಿಗಸ್ತ ಜನರು ಹಿಂದಿನ ಕಾಲದಿಂದಲೂ ಕಷ್ಟ ಸಂಕಟಗಳನ್ನು ಸಹಿಸಿಕೊಂಡು ಪ್ರತಿಫಲವನ್ನು ಹೊಂದುವುದಕ್ಕಾಗಿ ಓಡುತ್ತಿರುವ ಓಟವೆಂತಲೂ ಒಣ್ಣಿಸುತ್ತವೆ.

ಯಾಕೆಂದರೆ ಈ ಕಥೆಯು ಅವರೊಂದಿಗೆ ಮುಕ್ತಾಯವಾಗುವುದಿಲ್ಲ. ಆದರೆ ನಮ್ಮೊಂದಿಗೆ ಮುಕ್ತಾಯವಾಗುತ್ತದೆ. ನಾವು ತಾನೆ ಇದರ ಮುಕ್ತಾಯದ ಪಾತ್ರವನ್ನು

* **ಈ ವಾರದ ಪಾಠವನ್ನು ಮಾರ್ಚ್ 10ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ವಹಿಸುತ್ತೇವೆ. ನಾವು ಈ ಓಟದ ಅಂತಿಮ ಸುತ್ತಿನಲ್ಲಿ ಪ್ರವೇಶಿಸಿ ನಾವು ಯೇಸುವು ದೇವರ ಬಲಗಡೆಯಲ್ಲಿ ಕುಳಿತಿರುವ ಸ್ಥಳವನ್ನು ಗುರಿ ಮಾಡಿಕೊಂಡು ಓಡಿದ ನಂತರ ಈ ಕಥೆಯು ಕೊನೆಯಾಗುತ್ತದೆ. ಈ ಓಟವನ್ನು ಹೇಗೆ ಮುಗಿಸಬೇಕು ಎನ್ನುವುದಕ್ಕೆ ಆತನೇ ಸ್ಫೂರ್ತಿಯನ್ನು ತುಂಬುತ್ತಾನೆ ಮತ್ತು ಅದನ್ನು ಓಡಿಮುಗಿಸಿದುದಕ್ಕೆ ನಿದರ್ಶನವಾಗಿದ್ದಾನೆ. ಓಟವನ್ನು ಓಡಿ ಮುಗಿಸಿದವರಿಗೆ ಪ್ರತಿಫಲವು ನಿಶ್ಚಿತ ಎಂಬುದಕ್ಕೆ ಆತನು ಶ್ರೇಷ್ಠ ಸಾಕ್ಷಿಯಾಗಿದ್ದಾನೆ ಮತ್ತು ಮುಂಚೂಣಿ ಓಟಗಾರನಾಗಿ ನಮಗೋಸ್ಕರ ಮಾರ್ಗವನ್ನು ತೆರೆದಿದ್ದಾನೆ (ಇಬ್ರಿಯ 6:19,20, ಇಬ್ರಿಯ 10:19–23).

ಇಬ್ರಿಯ 11ನೇ ಅಧ್ಯಾಯವು ನಮಗೆ ದೇವರು ಮಾಡಿರುವ ವಾಗ್ದಾನಗಳು ಇನ್ನೂ ನೆರವೇರದಿರುವಾಗಲೂ ಅವುಗಳ ಮೇಲೆ ವಿಶ್ವಾಸವಿಡುವುದನ್ನು ನಂಬಿಕೆ ಎಂಬುದಾಗಿ ವಿವರಿಸುತ್ತದೆ. ಈ ಅಧ್ಯಾಯವು ನಂಬಿಕೆ ಎಂದರೆ ಏನು ಮತ್ತು ಇದನ್ನು ಹಿಂದಿನ ಉದಾಹರಣೆಯಿಂದ ಅದರಲ್ಲೂ ಮುಖ್ಯವಾಗಿ ನಂಬಿಕೆಯನ್ನು ಹುಟ್ಟಿಸುವವನೂ ಅದನ್ನು ಪೂರೈಸುವವನೂ ಆಗಿರುವ ಯೇಸುವಿನ ಮೂಲಕ ಹೊಂದಿಕೊಳ್ಳುತ್ತೇವೆ (ಇಬ್ರಿಯ 12:2).

**ಭಾನುವಾರ** **ಮಾರ್ಚ್ 6**

## ನೀತಿವಂತನು ನಂಬಿಕೆಯಿಂದಲೇ ಬದುಕುತ್ತಾನೆ

ಇಬ್ರಿಯ 10:35–39 ವಚನಗಳನ್ನು ಓದಿರಿ. ಈ ವಚನಗಳಲ್ಲಿ ದೇವರು ನಮಗೆ ಏನು ಹೇಳುತ್ತಿದ್ದಾನೆ?

ತಾಳ್ಮೆಯು ಕಡೆಯಕಾಲದಲ್ಲಿ ವಾಸಿಸುವ ದೇವಜನರ ಗುಣಸ್ವಭಾವವಾಗಿದೆ, ತಾಳ್ಮೆ ಇಲ್ಲದೆ ಹೋದರೆ ಅವರು ವಾಗ್ದಾನಗಳನ್ನು ಪಡೆದುಕೊಳ್ಳಲಾರರು (ಪ್ರಕ 13:10, ಪ್ರಕ 14:12) ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ದೃಢವಾಗಿ ಹಿಡಿದುಕೊಂಡರೆ ತಾಳ್ಮೆಯನ್ನು ತೋರಬಹುದು (ಇಬ್ರಿ 10:23, ಇಬ್ರಿ 4:14). ಅರಣ್ಯದಲ್ಲಿ ಅಲೆದಾಡಿದ ಜನಾಂಗ (ಇಸ್ರಾಯೇಲ್ಯರು) ನಂಬಿಕೆಯ ಕೊರತೆಯಿಂದ ವಾಗ್ದಾನವನ್ನು ಪಡೆದುಕೊಳ್ಳಲಾರದೆ ಹೋದರು ಎಂಬುದಾಗಿ ಪೌಲನು ಹೇಳುತ್ತಾನೆ (ಇಬ್ರಿ 3:19). ವಿಶ್ವಾಸಿಗಳು ವಾಗ್ದಾನ ಹೊಂದಿಕೊಳ್ಳುವ (ನೆರವೇರುವ) ಹೊಸ್ತಿಲಲ್ಲಿದ್ದಾರೆ ಎಂದು ಇಬ್ರಿಯ ಪತ್ರಿಕೆಯು ವರ್ಣಿಸುತ್ತದೆ ಇಬ್ರಿಯ 9:28, ಇಬ್ರಿ 10:25, 36–

38) ಮತ್ತು ವಾಗ್ದಾನಗಳನ್ನು ಪಡೆದುಕೊಳ್ಳಬೇಕಾದರೆ ನಂಬಿಕೆಯನ್ನು ಪ್ರಯೋಗಿಸಬೇಕೆಂದು ಹೇಳುತ್ತದೆ (ಇಬ್ರಿ 10:39). ಪೌಲನು ನಂಬಿಕೆಯನ್ನು ಪ್ರತಿಪಾದಿಸುವುದಕ್ಕೆ ಹಬಕ್ಕೂಕ 2:2–4 ವಚನಗಳನ್ನು ಉದಾಹರಿಸುತ್ತಾನೆ. ನೀತಿವಂತರನ್ನು ಹಿಂಸಿಸುವ ದುಷ್ಟರನ್ನು ಯಾಕೆ ಕಟಾಕ್ಷಿಸುತ್ತಿಯೆಂದು ಹಬಕ್ಕೂಕನು ದೇವರನ್ನು ಪ್ರಶ್ನಿಸುತ್ತಾನೆ (ಹಬಕ್ಕೂಕ 1:12–17). ಪ್ರವಾದಿಯೂ ಆತನ ಜನರು ಹಿಂಸೆಗೊಳಗಾಗಿರುವುದರಿಂದ ದೇವರು ಸುಮ್ಮನಿರಬಾರದೆಂದು ಅವರು ಬಯಸುತ್ತಾನೆ. ತನ್ನ ವಾಗ್ದಾನವು ನೆರವೇರಲು ತಕ್ಕ ಸಮಯವನ್ನು ನೇಮಿಸಿದ್ದೇನೆ ಅಲ್ಲಿಯವರೆಗೆ ಕಾಯಬೇಕೆಂದು ದೇವರು ಹೇಳುತ್ತಾನೆ (ಹಬ 2:2–4). ಹಬಕ್ಕೂಕನೂ ಆತನ ಜನರೂ ನಮ್ಮ ಹಾಗೆಯೇ ವಾಗ್ದಾನ ಸಮಯ ಮತ್ತು ಅದು ನೆರವೇರುವ ಸಮಯದ ಮಧ್ಯೆ ವಾಸಿಸುತ್ತಿದ್ದರು. ದೇವರು ಹಬಕ್ಕೂಕನಿಗೆ ಕೊಟ್ಟ ಸಂದೇಶವು ಇಬ್ರಿಯ ಪತ್ರಿಕೆಯಲ್ಲಿ ಮುಂದುವರೆದಿದೆ "ಬರುವಾತನು ಇನ್ನು ಸ್ವಲ್ಪ ಕಾಲದಲ್ಲಿ ಬರುವನು, ತಡಮಾಡುವುದಿಲ್ಲ" (ಇಬ್ರಿಯ 10:37 ಇದನ್ನು ಹಬಕ್ಕೂಕ 2:3ರಲ್ಲಿಯೂ ನೋಡಿರಿ).

ಈ ವಚನವು ಯೇಸುಕ್ರಿಸ್ತನನ್ನು ಕುರಿತು ಹೇಳುತ್ತದೆ. ಆತನು ನೀತಿವಂತನು ಮತ್ತು ನಂಬಿಕೆಯನ್ನು ತನ್ನ ಜೀವಿತದಲ್ಲಿ ಸಾದರ ಪಡಿಸಿದವನು, ದೇವರನ್ನು ಮೆಚ್ಚಿಸುವವನೂ ಜೀವದಾಯಕನೂ ಆಗಿದ್ದಾನೆ (ಇಬ್ರಿಯ 10:5–10).

ಮತ್ಯಾಕೆ ಆತನು ತಡಮಾಡುತ್ತಾನೆ? ಆತನು ತಡ ಮಾಡುವವನಲ್ಲ. ಆತನು ಈಗಾಗಲೇ ನಮಗೋಸ್ಕರ ಸಾಯುವುದಕ್ಕೆ ಬಂದಿದ್ದಾನೆ (ಇಬ್ರಿಯ 9:15–26) ಮತ್ತು ಆತನು ನಿಶ್ಚಯವಾಗಿ ನೇಮಿತ ಸಮಯಕ್ಕೆ ಒಂದೇ ಬರುತ್ತಾನೆ (ಇಬ್ರಿಯ 9:27,28 ಮತ್ತು ಇಬ್ರಿಯ 10:25).

ನೀತಿವಂತನು ನಂಬಿಕೆಯಿಂದಲೇ ಬದುಕುತ್ತಾನೆ ಎಂಬುದಾಗಿ ದೇವರ ಸಂದೇಶವು ಮುಂದುವರೆಯುತ್ತದೆ (ಇಬ್ರಿ 10:38). ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆ 1:17ರಲ್ಲಿ ಮತ್ತು ಗಲಾತ್ಯ 3:11ರಲ್ಲಿ ಇದನ್ನೇ ಹೇಳುತ್ತಾನೆ. ದೇವರಿಂದ ಉಂಟಾಗುವ ನೀತಿಯು ನಂಬಿಕೆಯ ಫಲವಾಗಿದ್ದು, ನಂಬಿಕೆಯನ್ನು ಪ್ರಕಟಿಸುವಂಥದ್ದಾಗಿದೆ ಎಂದು ರೋಮ 1:16,17 ನಮಗೆ ಅರಿವನ್ನು ನೀಡುತ್ತದೆ. ದೇವರು ಮೊದಲು ತಾನು ಮಾಡಿದ ವಾಗ್ದಾನಗಳಿಗೆ ನಂಬಿಗಸ್ತನಾಗಿರುತ್ತಾನೆ,

ಆತನ ನಂಬಿಗಸ್ತಿಕೆಯ ಫಲವಾಗಿ ನಮಗೆ ನಂಬಿಕೆ ಹುಟ್ಟುತ್ತದೆ ಅಥವಾ ಅದರಿಂದ ನಾವು ನಂಬಿಗಸ್ತರಾಗುತ್ತೇವೆ.

ಹಾಗಾಗಿ ದೇವರು ತಾನು ಮಾಡಿದ ವಾಗ್ದಾನಗಳಿಗೆ ನಂಬಿಗಸ್ತನಾಗಿರುವುದರಿಂದ (2 ತಿಮೊಥೆ 2:13). ಒಬ್ಬ ನೀತಿವಂತನು ದೇವರ ನಂಬಿಗಸ್ತಿಕೆಗೆ ಪ್ರತಿಯಾಗಿ ತಾನೂ ಸಹಾ ನಂಬಿಗಸ್ತನಾಗಿ ಉಳಿಯುತ್ತಾನೆ.

ನಮ್ಮ ನಂಬಿಕೆಯು ದೇವರ ನಂಬಿಗಸ್ತಿಕೆಯ ಫಲಿತಾಂಶವೆಂದು ಗುರುತಿಸುವುದು ಯಾಕೆ ಮುಖ್ಯವಾಗುತ್ತದೆ? ಆತನು ನಮಗಾಗಿ ತೋರುವ ನಂಬಿಗಸ್ತಿಕೆಗೆ ಮತ್ತು ನಮಗಾಗಿ ಮಾಡಿದ ವಾಗ್ದಾನಗಳಿಗೆ ನಾವು ಹೆಚ್ಚು ಭರವಸೆಯುಳ್ಳವರಾಗಲು ಹೇಗೆ ಕಲಿತುಕೊಳ್ಳಬಲ್ಲೆವು?

**ಸೋಮವಾರ** **ಮಾರ್ಚ್ 7**

## ಅಬ್ರಹಾಮನು ನಂಬಿಕೆಯಿಂದ

ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವುದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳುವುದೂ ಆಗಿದೆಯೆಂದು ಇಬ್ರಿಯ 11:1ನೇ ವಚನ ಹೇಳುತ್ತದೆ. ನಂತರ ಈ ಅಧ್ಯಾಯವು ಇಸ್ರಾಯೇಲ್ಯರ ಚರಿತ್ರೆಯಲ್ಲಿ ನಂಬಿಕೆಗೆ ಉದಾಹರಣೆಯಾದ ನಂಬಿಗಸ್ತರ ಪಟ್ಟಿಯನ್ನು ಮತ್ತು ಅವರು ಹೇಗೆ ತಮ್ಮ ಕೃತ್ಯಗಳ ಮೂಲಕ ನಂಬಿಗಸ್ತರೆಂದು ತೋರಿಸಿದರು ಎಂಬುದನ್ನು ಸಹಾ ತಿಳಿಸುತ್ತದೆ.

ಇಬ್ರಿಯ 11:1–9 ವಚನಗಳನ್ನು ಓದಿರಿ. ನಂಬಿಕೆಯ ಈ ವೀರರು ತಮ್ಮ ನಂಬಿಕೆಯು ಉದಾಹರಣೆಯಾಗುವಂಥ ಯಾವ ಕೆಲಸವನ್ನು ಮಾಡಿದರು? ಅವರು ಮಾಡಿದ ಯಾವ ಕಾರ್ಯಗಳು ಅವರು ಇನ್ನೂ ಕಾಣದಿದ್ದ ವಿಷಯಗಳ ಮೇಲೆ ನಿರೀಕ್ಷೆಯಿಟ್ಟದ್ದಕ್ಕೆ ಸಂಬಂಧಪಡುತ್ತವೆ?

ಈ ದಿನದ ಪಾಠದಲ್ಲಿ ಬಹುಶಃ ಅಬ್ರಹಾಮನದು ಬಹಳ ಮುಖ್ಯವಾದ ಪಾತ್ರವಾಗಿದೆ. ನಂಬಿಕೆಯನ್ನು ವ್ಯಕ್ತಪಡಿಸುವ ಆತನ ಕೊನೆಯ ಕೆಲಸವು ನಂಬಿಕೆಯ ನಿಜವಾದ ಗುಣವನ್ನು ತಿಳಿಸಿಕೊಡುತ್ತದೆ.

ದೇವರು ಅಬ್ರಹಾಮನಿಗೆ ಅವನ ಮಗನಾದ ಇಸಾಕನನ್ನು ತನಗೆ ಬಲಿಯಾಗಿ ಅರ್ಪಿಸಬೇಕೆಂದು ಕೇಳಿದುದು ದೇವರ ಗುಣಕ್ಕೆ ವಿರೋಧವಾಗಿರುವಂತೆ ಕಾಣುತ್ತದೆ (ಇಬ್ರಿಯ 11:17,18). ಅಬ್ರಹಾಮನಿಗೆ ಇಸಾಕನೊಬ್ಬನೇ ಅಲ್ಲದೆ ಇಸ್ಮಾಯೇಲನೂ ಕೂಡ ಮಗನಾಗಿದ್ದನು. ಅಲ್ಲದೆ ಇಸ್ಮಾಯೇಲನು ಚೊಚ್ಚಲ ಮಗನಾಗಿದ್ದನು, ಆದಾಗ್ಯೂ ದೇವರು ಸಾರಳ ಬಯಕೆಯಂತೆ ಇಸ್ಮಾಯೇಲನನ್ನೂ ಆತನ ತಾಯಿಯನ್ನೂ ಹೊರಗೆ ಹಾಕೆಂದು ಅಬ್ರಹಾಮನಿಗೆ ಹೇಳುತ್ತಾನೆ, ಯಾಕೆಂದರೆ ಅವರಿಬ್ಬರ ಕಾಳಜಿಯನ್ನು ದೇವರೇ ಹೊರುವವನಾಗಿದ್ದನು ಮತ್ತು ಅಬ್ರಹಾಮನ ಸಂತಾನವು ಇಸಾಕನ ಮೂಲಕ ಹೆಸರು ಹೊಂದಬೇಕಾಗಿತ್ತು (ಆ.ಕಾಂಡ 21:12,13). ಮುಂದಿನ ಅಧ್ಯಾಯದಲ್ಲಿ ದೇವರು ಅಬ್ರಹಾಮನಿಗೆ ಇಸಾಕನನ್ನು ತನಗೆ ಬಲಿಯಾಗಿ ಅರ್ಪಿಸಬೇಕೆಂದು ಕೇಳುತ್ತಾನೆ. ಆದಿಕಾಂಡ 22ನೇ ಅಧ್ಯಾಯದಲ್ಲಿ ದೇವರು ಅಬ್ರಹಾಮನಿಗೆ ಕೊಟ್ಟ ಆಣತಿ ಆದಿಕಾಂಡ 12–21 ರವರೆಗೆ ಕೊಟ್ಟ ವಾಗ್ದಾನಕ್ಕೆ ಸಂಪೂರ್ಣವಾಗಿ ವಿರೋಧವಾಗಿರುವಂತೆ ಕಾಣುತ್ತದೆ.

ಅಬ್ರಹಾಮನು ಆಶ್ಚರ್ಯಕರವಾದ ರೀತಿಯಲ್ಲಿ ಇಸಾಕನನ್ನು ಬಲಿ ಅರ್ಪಿಸಿದರೂ ದೇವರೆ ಆತನಿಗೆ ಜೀವಕೊಡುತ್ತಾನೆಂದು ತೀರ್ಮಾನ ತೆಗೆದುಕೊಳ್ಳುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತಾನೆ. ಇದು ಖಂಡಿತವಾಗಿಯೂ ಆಶ್ಚರ್ಯಕರವಾದುದು. ಏಕೆಂದರೆ ಅದುವರೆಗೂ ಯಾರು ಪುನರುತ್ಥಾನಗೊಂಡಿರಲಿಲ್ಲ. ಅಬ್ರಹಾಮನಿಗಿದ್ದ ಹಿಂದಿನ ಅನುಭವವು ಆತನು ಆ ರೀತಿಯಾಗಿ ತೀರ್ಮಾನ ತೆಗೆದುಕೊಳ್ಳುವಂತೆ ಆತನನ್ನು ಮುನ್ನಡೆಸಿತು. ಇಬ್ರಿಯ 11:12ನೇ ವಚನದಲ್ಲಿ ದೇವರು ಮೃತಪ್ರಾಯನಾಗಿದ್ದ ಅಬ್ರಹಾಮನಿಂದ ಇಸಾಕನು ಹುಟ್ಟುವಂತೆ ಶಕ್ತಿಯನ್ನು ತುಂಬಿದನು ಎಂಬುದಾಗಿ ಹೇಳುತ್ತದೆ. ಅಬ್ರಹಾಮನು ಮೃತಪ್ರಾಯನಾಗಿದ್ದನು ಸಾರಳು ಬಂಜೆಯಾಗಿದ್ದಳು. ಆದಾಗ್ಯೂ ಅಬ್ರಹಾಮನು ನಿರೀಕ್ಷೆಗೆ ವಿರೋಧವಾಗಿ ನಿರೀಕ್ಷೆಯಿಟ್ಟು ತನ್ನನ್ನು ಅನೇಕ ಜನಾಂಗಗಳಿಗೆ ತಂದೆಯನ್ನಾಗಿ ಮಾಡುವೆನೆಂದು ದೇವರು ಮಾಡಿದ ವಾಗ್ದಾನದ ಮೇಲೆ ನಂಬಿಕೆ ಇಟ್ಟನು, ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವುದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು ಎಂಬುದಾಗಿ ಹೇಳುತ್ತದೆ (ರೋಮ 4:17–20). ಹಾಗಾಗಿ ದೇವರು ತನ್ನಂಥ ಮೃತಪ್ರಾಯನಿಂದ ಇಸಾಕನನ್ನು

ಹುಟ್ಟಿಸಿರುವಾಗ ಒಂದುವೇಳೆ ಆತನು ಸತ್ತುಹೋದರೂ ಮರುಜೀವ ನೀಡುತ್ತಾನೆಂದು ಅಬ್ರಹಾಮನು ಅಂದುಕೊಂಡಿರಬಹುದು. ಪೂರ್ವದಲ್ಲಿ, ಈ ಹಿಂದೆ ದೇವರ ಮುನ್ನಡೆಸುವಿಕೆಯನ್ನು ಕಂಡ ಅಬ್ರಹಾಮನು ಭವಿಷ್ಯದಲ್ಲಿಯೂ ನಡೆಸುತ್ತಾನೆಂದು ಕಂಡುಕೊಂಡನು.

ದೇವರು ನಮ್ಮ ಜೀವಿತಗಳನ್ನು ಹಿಂದೆ ಹೇಗೆ ನಡೆಸಿಕೊಂಡು ಬಂದನೆಂಬುದನ್ನು ಧ್ಯಾನ ಮಾಡುವುದು ಈವಾಗ ನಾವು ನಂಬಿಕೆಯಿಟ್ಟು ಭರವಸೆಯಿಂದ ಸಾಗುವುದಕ್ಕೆ ಬಹಳ ಮುಖ್ಯವಾಗಿರುತ್ತದೆ ಏಕೆ?

**ಮಂಗಳವಾರ** **ಮಾರ್ಚ್ 8**

## ಮೋಶೆ : ಕಾಣದಿರುವುದನ್ನು ನಂಬಿದನು

ಓದಿರಿ : ಇಬ್ರಿಯ 11:20–28. ಈ ನಂಬಿಕೆಯುಳ್ಳ ಜನರು ಏನು ಮಾಡಿದರು? ಅವರ ಕ್ರಿಯೆಗಳು ನಿರೀಕ್ಷೆ ಮತ್ತು ಕಾಣದಿರುವ ವಿಷಯಗಳಿಗೆ ಸಂಬಂಧಪಡುತ್ತವೆ ಹೇಗೆ?

ನಂಬಿಕೆಯನ್ನು ಕುರಿತ ಈ ಅಧ್ಯಾಯದಲ್ಲಿ ಮೋಶೆಯು ಎರಡನೇ ದೊಡ್ಡ ಉದಾಹರಣೆಯಾಗಿದ್ದಾನೆ. ಮೋಶೆಯ ಜೀವನವು ರಾಜನ ವಿರೋಧವಾಗಿ ಮಾಡಿದ ಎರಡು ಕಾರ್ಯಗಳಿಂದ ಕೂಡಿದೆ ಒಂದು ಆತನ ಜೀವನದ ಆರಂಭದಲ್ಲಿ ನಡೆಯಿತು ಇನ್ನೊಂದು ಆತನು ದೊಡ್ಡವನಾದಾಗ ತಾನೇ ತೆಗೆದುಕೊಂಡ ತೀರ್ಮಾನದಲ್ಲಿ ನಡೆಯಿತು. ಆತನ ತಂದೆ ತಾಯಿಗಳು ಆತನು ಮಗುವಿದ್ದಾಗ ಅರಸನ ಅಪ್ಪಣೆಗೆ ಭಯಪಡದೆ ನಂಬಿಕೆಯಿಂದಲೇ ಮೂರುತಿಂಗಳು ಬಚ್ಚಿಟ್ಟರು (ಇಬ್ರಿಯ 11:23) ಮತ್ತು ಅವನು ಅರಮನೆಯಲ್ಲಿ ಬೆಳೆದು ದೊಡ್ಡ ಸ್ಥಾನಪಡೆಯುವಾಗ ಅರಸನ ರೌದ್ರಕ್ಕೆ ಭಯಪಡದೆ ಐಗುಪ್ತ ದೇಶವನ್ನು ಬಿಟ್ಟು ಹೋದನು (ಇಬ್ರಿಯ 11:27). ಮೋಶೆಯು ಮಾಡಿದ ಅಸಾಧಾರಣವಾದ ಕೆಲಸವೇನೆಂದರೆ ಏನೇ ಆಗಲಿ ತಾನು ಫರೋಹನ ಕುಮಾರ್ತೆಯ ಮಗನೆನಿಸಿಕೊಳ್ಳುವುದು ಬೇಡವೆಂದು ತೀರ್ಮಾನ ಮಾಡಿದುದು (ಇಬ್ರಿಯ 11:24).

ಫರೋಹನ ಕುಮಾರ್ತೆಯ ಸಾಕುಮಗನು ಎಂಬ ಉಲ್ಲೇಖವು ಆತನು ಮುಂದಿನ ಫರೋಹನ ಸ್ಥಾನಕ್ಕೆ ನೇಮಕಗೊಳ್ಳುವುದಕ್ಕಿದ್ದನೆಂಬ ಅಭಿಪ್ರಾಯ ನೀಡುತ್ತದೆ.

ಏನೇ ಆಗಲಿ ಮೋಶೆಯು ಆ ಕಾಲದ ಉನ್ನತವಾದ ಸಾಮ್ರಾಜ್ಯಕ್ಕೆ ರಾಜನಾಗುವ ಅವಕಾಶವನ್ನು ತೊರೆದು ಕೇವಲ ದಾಸತ್ವದಿಂದ ಬಿಡುಗಡೆಯಾದ ನಿರಾಶ್ರಿತರಿಗೆ ತನ್ನನ್ನು ನಾಯಕನನ್ನಾಗಿ ಮಾಡಿಕೊಂಡನು ಇಬ್ರಿಯ 11:24–27ನ್ನು ಇಬ್ರಿಯ 10:32–35ರೊಂದಿಗೆ ಹೋಲಿಸಿರಿ. ಇಬ್ರಿಯ ಪತ್ರಿಕೆಯನ್ನು ಮೂಲತಃ ಬರೆಯಲ್ಪಟ್ಟವರಿಗೂ ಮತ್ತು ಮೋಶೆಗೂ ಮುಂದೆ ದೇವರು ಕೊಡುವ ಅನುಭವದಲ್ಲಿ ಯಾವ ಸಾಮ್ಯತೆಗಳಿವೆ?

ಮೋಶೆಯ ವಿಷಯದಲ್ಲಿ ಪಡಬೇಕಾದ ಹೆಚ್ಚಳವೇನೆಂದರೆ ಆತನು ಐಗುಪ್ತ ಸಾಮ್ರಾಜ್ಯದ ಅರಸನಾಗುವ ಅವಕಾಶಕ್ಕಿಂತಲೂ ಕಾಣದಿರುವ ಇದ್ದ ಸನ್ನಿವೇಶದ ಹೆಚ್ಚಿನ ಸೌಭಾಗ್ಯನ್ನು ಬಯಸಿದನು. ಐಗುಪ್ತದೇಶದ ಸರ್ವೈಶ್ವರಕ್ಕಿಂತಲೂ ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಠ ಭಾಗ್ಯವೆಂದೆಣಿಸಿಕೊಂಡನು; ಯಾಕೆಂದರೆ ಬರುವ ಪ್ರತಿಫಲದ ಮೇಲೆ ಕಣ್ಣಿಟ್ಟಿದ್ದನು ಎಂಬುದಾಗಿ ಇಬ್ರಿಯ ಪತ್ರಿಕೆಯು ಹೇಳುತ್ತದೆ. ಇಲ್ಲಿ ಹೇಳಿರುವ ಪ್ರತಿಫಲವು ಇಬ್ರಿಯ 10:35ರಲ್ಲಿ ಹೇಳಿರುವ ಪ್ರತಿಫಲವೂ ಒಂದೇ ಆಗಿದ್ದು ಅದು ತನ್ನಲ್ಲಿ ನಂಬಿಕೆ ಇಟ್ಟವರೆಲ್ಲರಿಗೂ ಆತನು ವಾಗ್ದಾನ ಮಾಡಿದ ಪ್ರತಿಫಲವಾಗಿದೆ.

ಮೋಶೆಯ ತೀರ್ಮಾನದ ಬಗ್ಗೆ ಬರೆದಿರುವ ಪೌಲನ ಮಾತುಗಳು ಪತ್ರಿಕೆಯ ಮೂಲ ಓದುಗರ ಹೃದಯದಲ್ಲಿ ಬಲಯುತವಾಗಿ ಪ್ರತಿಧ್ವನಿಸಿರುತ್ತವೆ. ಯೇಸುಕ್ರಿಸ್ತನ ಮೇಲೆ ಇಟ್ಟಿದ್ದ ನಂಬಿಕೆಯ ನಿಮಿತ್ತ ಅವರು ಎಲ್ಲಾ ಹಿಂಸೆ ನಿಂದೆ ಕಷ್ಟ ಸಂಕಟಗಳನ್ನು ತಾಳಿಕೊಂಡರು (ಇಬ್ರಿಯ 10:32–34). ಕೆಲವರು ಸೆರೆಮನೆಯಲ್ಲಿದ್ದು ಸಹಿಸಿಕೊಂಡರು (ಇಬ್ರಿಯ 13:3). ಇದಕ್ಕೆ ಸಮಾನವಾದ ಅರ್ಥದಲ್ಲಿ ಹೇಳುವುದಾದರೆ ಮೋಶೆಯು ತನ್ನನ್ನು ತಾನು ದೇವಜನರಿಂದ ದೇವಜನರಿಗಾಗುವ ನಿಂದೆ ಅಪಮಾನಗಳಿಗೆ ಗುರಿಯಾಗುವುದನ್ನು ಆರಿಸಿಕೊಂಡನು. ಐಗುಪ್ತ ದೇಶದ ಸರ್ವೈಶ್ವರಕ್ಕಿಂತ ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಠ ಭಾಗ್ಯವೆಂದೆಣಿಸಿಕೊಂಡನು?

ನಿಮ್ಮ ನಂಬಿಕೆಯ ನಿಮಿತ್ತ ನೀವು ಪಡುತ್ತಿರುವ ಕೆಲವು ಕಷ್ಟಗಳು ಯಾವವು? ಅದಕ್ಕೋಸ್ಕರ ನೀವು ಏನನ್ನು ತೊರೆಯಬೇಕಾಯ್ತು? ಬರುವ ಪ್ರತಿಫಲವು ಕಣ್ಣಿಗೆ ಕಾಣಿಸದಿದ್ದರೂ ಅಂತಿಮವಾಗಿ ಯೋಗ್ಯವಾದದು ಏಕೆ?

**ಬುಧವಾರ** **ಮಾರ್ಚ್ 9**

## ನಂಬಿಕೆಯಿಂದಲೇ ರಹಾಬಳು ಮತ್ತು ಇತರರು

ಇಬ್ರಿಯ 11:31 ಮತ್ತು ಯೆಹೋಶುವ 2:9–11ನ್ನು ಓದಿರಿ. ಸತ್ಯವೇದದ ಶ್ರೇಷ್ಠ ವ್ಯಕ್ತಿಗಳ ಪಟ್ಟಿಗೆ ಅನ್ಯಳಾದ ದುರಾಚಾರಿಯಾದ ರಹಾಬಳನ್ನು ಸೇರಿಸಲಾಗಿದೆ ಏಕೆ?

ಇಬ್ರಿಯ 11ನೇ ಅಧ್ಯಾಯದಲ್ಲಿ ಬಹುಶಃ ಬಹಳ ಅನಿರೀಕ್ಷಿತವಾಗಿ ಕಾಣಸಿಗುವ ವ್ಯಕ್ತಿ ಎಂದರೆ ರಹಾಬಳು. ಹೆಸರಿನಿಂದ ಕರೆಯಲ್ಪಟ್ಟ ಇಬ್ಬರು ಹೆಂಗಸರಲ್ಲಿ ರಹಾಬಳು ಒಬ್ಬಳಾಗಿದ್ದಾಳೆ. ಆಕೆಯು ಪಟ್ಟಿಯಲ್ಲಿ ಹತ್ತನೆಯ ವ್ಯಕ್ತಿಯಾಗಿದ್ದಾಳೆ. ಇಸ್ರಾಯೇಲ್ಯರ ಪೂರ್ವಪಿತೃಗಳು ಮೊದಲಿಗೆ ಬರುತ್ತಾರೆ. ಅವರಲ್ಲಿ ಪ್ರತಿಯೊಬ್ಬರೂ ನೀತಿವಂತರೆಂದು ಕರೆಯಲ್ಪಟ್ಟಿದ್ದಾರೆ. ಇವಳ ವಿಷಯಕ್ಕೆ ಬರುವುದಾದರೆ ಆಕೆಯು ಮಹಿಳೆ ಮಾತ್ರವಲ್ಲ ಸೂಳೆಯೆನಿಸಿಕೊಂಡ ಅನ್ಯಸ್ತ್ರೀಯಾಗಿದ್ದಳು.

ಬಹಳ ಆಶ್ಚರ್ಯಕರವಾದ ವಿಷಯವೇನೆಂದರೆ ಆಕೆಯು ಸಹಾ ಈ ಅಧ್ಯಾಯದ ಪ್ರಧಾನವಾದ ಉನ್ನತವಾದ ವ್ಯಕ್ತಿಯಾಗಿದ್ದಾಳೆ. ಈ ಅಧ್ಯಾಯದಲ್ಲಿರುವ ಹೆಸರುಳಗನ್ನು ವಿಶಿಷ್ಟವಾದ ರೀತಿಯಲ್ಲಿ ಪಟ್ಟಿ ಮಾಡಲಾಗಿದೆ. ಎಲ್ಲಾ ಹೆಸರುಗಳ ಜೊತೆಗೆ ನಂಬಿಕೆಯೆಂಬ ಪದವು ಸೇರಿದೆ. ಇಂಥಾವರು ಇಂಥಿಂಥ ಕಾರ್ಯವನ್ನು ನಂಬಿಕೆಯಿಂದ ಮಾಡಿದರೆಂಬುದು ಅಥವಾ ಇಂಥದದ್ದು ನಂಬಿಕೆಯಿಂದ ಆತುರವಾಗಿ ಈ ತರವಾಗಿ ನಡೆಯಿತೆಂದು ಪ್ರತಿ ಉದಾಹರಣೆಯಲ್ಲಿ ಕಾಣುವ ಮಾದರಿಯಾಗಿದೆ.

ಈ ಪುನರಾರ್ತಿತ ಶೈಲಿಯಿಂದ ಓದುಗನ ನಿರೀಕ್ಷೆಯು ಹೆಚ್ಚುತ್ತಾ ಹೋಗಿ ಇದರ ಪರಾಕಾಷ್ಠೆತೆಯ "ನಂಬಿಕೆಯಿಂದಲೇ ಯೆಹೋಶುವನು ಜನರನ್ನು ವಾಗ್ದತ್ತ ದೇಶಕ್ಕೆ ನಡೆಸಿದನು" ಎಂದು ಕೇಳಿಸಿಕೊಂಡಾಗ ಅನುಭವಕ್ಕೆ ಬರುತ್ತದೆ. ಆದರೆ ವಚನವು ಹಾಗೆ ಹೇಳುವುದಿಲ್ಲ. ಇಲ್ಲಿ ಯೆಹೋಶುವನ ಹೆಸರು ಬಿಟ್ಟು ಹೋಗುತ್ತದೆ ಸೂಳೆಯ ಹೆಸರು ಆ ಜಾಗವನ್ನು ಹಿಡಿದುಕೊಳ್ಳುತ್ತದೆ. ರಹಾಬಳ ಹೆಸರನ್ನು ಉಲ್ಲೇಖಿಸಿದ ಮೇಲೆ ಈ ಪುನರಾವರ್ತಿತ ಪಟ್ಟಿಯು "ಇನ್ನು ಏನು ಹೇಳಬೇಕು?" ಎಂಬ ಪ್ರಶ್ನಾರ್ಥಕ ವಾಕ್ಯದೊಂದಿಗೆ ತಕ್ಷಣ ಕೊನೆಗೊಳ್ಳುತ್ತದೆ (ಇಬ್ರಿಯ 11:32).

ನಂತರ ಪೌಲನು ಕೆಲವು ಹೆಸರುಗಳನ್ನು ಮತ್ತು ಘಟನೆಗಳನ್ನು ಆತುರವಾಗಿ ಪಟ್ಟಿ ಮಾಡಿ ಸವಿವರವಾಗಿ ಹೇಳುವುದನ್ನು ನಿಲ್ಲಿಸುತ್ತಾನೆ.

ಇಲ್ಲಿ ರಹಾಬಳು ನಡೆಸಿದ ಕ್ರಿಯೆ ಏನೆಂದರೆ ಆಕೆಯು ಕೇಳಿಸಿಕೊಂಡಳು, ಆಕೆಯು ನಂಬಿದಳು, ಆಕೆಯು ನಂಬಿ ವಿಧೇಯಳಾದಳು. ಆದರೆ ಆಕೆಯು ಯಾವುದನ್ನು ಕಣ್ಣಾರೆ ಕಂಡವಳಲ್ಲ. ಆಕೆಯು ಐಗುಪ್ತದೇಶದಲ್ಲಿ ನಡೆದ ಉಪದ್ರವಗಳನ್ನು ಕಂಡಿರಲಿಲ್ಲ ಅಥವಾ ಕೆಂಪು ಸಮುದ್ರದಿಂದ ದಾಟಿಬಂದುದನ್ನು ನೋಡಿರಲಿಲ್ಲ. ಇಲ್ಲವೇ ಬಂಡೆಯಿಂದ ನೀರು ಹರಿದುದನ್ನಾಗಲೀ ಪರಲೋಕದಿಂದ ಮನ್ನ ಸುರಿದುದನ್ನಾಗಲೀ ನೋಡಿರಲೇ ಇಲ್ಲ. ಆದಾಗ್ಯೂ ಆಕೆಯು ನಂಬಿದಳು. ಈಕೆಯು ಇಬ್ರಿಯರಿಗೆ ಒಂದು ಒಳ್ಳೆಯ ಉದಾಹರಣೆಯಾಗಿದ್ದಾಳೆ. ಅವರೂ ಸಹಾ ಯೇಸುವಿನ ಉಪದೇಶವನ್ನು ಕೇಳಿಸಿಕೊಂಡಿರಲಿಲ್ಲ. ಅವರಾಗಲಿ ಅಥವಾ ನಾವಾಗಲಿ ಆತನು ಮಾಡಿದ ಅದ್ಭುತಗಳನ್ನು ನೋಡೇ ಇರಲಿಲ್ಲ. ಆದಾಗ್ಯೂ ಆತನಲ್ಲಿ ನಂಬಿಕೆ ಇಟ್ಟಿದ್ದೇವೆ.

"ರಹಾಬಳು ಯರಿಕೊ ಪಟ್ಟಣದ ಕೋಟೆಯ ಗೋಡೆಯ ಮೇಲೆ ವಾಸಿಸುತ್ತಿದ್ದ ಒಬ್ಬ ಸೂಳೆಯಾಗಿದ್ದಳು. ಆಕೆಯು ಪಟ್ಟಣದ ಗೂಢಚರ್ಯೆಯನ್ನು ಮಾಡಲು ಬಂದ ಇಬ್ಬರು ಇಸ್ರಾಯೇಲ್ಯರನ್ನು ಬಚ್ಚಿಟ್ಟಳು. ಆಕೆಯು ಅವರ ಮೇಲೆ ತೋರಿಸಿದ ದಯೆಯ ನಿಮಿತ್ತ ಮತ್ತು ದೇವರಲ್ಲಿ ಆಕೆಯು ಇಟ್ಟ ನಂಬಿಕೆಯನ್ನು ಅವರಿಗೆ ಹೇಳಿದ ನಿಮಿತ್ತ ಆ ಇಬ್ಬರು ಗೂಢಚರ್ಯರು ಆಕೆಯನ್ನೂ ಆಕೆಯ ಮನೆಯವರನ್ನೂ ಪಟ್ಟಣವನ್ನು ವಶಪಡಿಸಿಕೊಂಡಾಗ ಉಳಿಸುವುದಾಗಿ ಪ್ರಮಾಣ ಮಾಡಿದರು" ಎಲೆನ್ ಜಿ ವೈಟಮ್ಮನವರ 'ಡಾಟರ್ಸ್ ಆಫ್ ಗಾಡ್' 35ನೇ ಪುಟ.

ಅನೇಕ ದೇವಜನರು ಅನುಭವಿಸಿದ ಕಷ್ಟಗಳನ್ನು ಪೌಲನು ಪಟ್ಟಿ ಮಾಡುತ್ತಾ ಮುಂದುವರೆಯುತ್ತಾನೆ (ಇಬ್ರಿಯ 11:35–38). "ಬಿಡುಗಡೆ ಹೊಂದುವುದಕ್ಕೆ ಇಷ್ಟಪಡದವರು" ಎಂಬ ಪದವೃಂದವು (ಇಬ್ರಿಯ 11:35). ಅವರು ತಪ್ಪಿಸಿಕೊಳ್ಳುವ ಸಾಧ್ಯತೆಯಿದ್ದರೂ ಹಾಗೆ ಮಾಡಲಿಲ್ಲ. ಯಾಕೆಂದರೆ ಅವರ ದೃಷ್ಟಿಯು ದೇವರು ಕೊಡುವ ಪ್ರತಿಫಲದ ಮೇಲಿತ್ತು ಎಂಬುದನ್ನು ಸೂಚಿಸುತ್ತದೆ.

ನಾವು ಈ ಘಟನೆಗಳು ನಡೆಯುವುದನ್ನು ಕಣ್ಣಾರೆ ನೋಡದಿದ್ದರೂ (ಆರು

ದಿನಗಳಲ್ಲಿ ನಡೆದ ಸೃಷ್ಟಿ, ವಿಮೋಚನೆ, ಯೇಸುವಿನ ಶಿಲುಬೆ) ಅವುಗಳನ್ನು ನಂಬುವುದಕ್ಕೆ ನಮಗೆ ಅನೇಕ ಒಳ್ಳೆಯ ಕಾರಣಗಳಿವೆ ಏಕೆ?

**ಗುರುವಾರ** **ಮಾರ್ಚ್ 10**

## ಯೇಸು ನಮ್ಮಲ್ಲಿ ನಂಬಿಕೆ ಹುಟ್ಟಿಸುತ್ತಾನೆ ಮತ್ತು ಪೂರೈಸುತ್ತಾನೆ

ಇಬ್ರಿಯ 12:1–3 ವಚನಗಳನ್ನು ಓದಿರಿ. ಈ ವಚನಗಳು ನಾವು ಏನು ಮಾಡಬೇಕೆಂದು ಕೇಳುತ್ತವೆ?

ನಂಬಿಕೆಯ ಪ್ರತಿಪಾದನೆಯ ಪರಾಕಾಷ್ಠತೆಯು ಇಬ್ರಿಯ 12ನೇ ಅಧ್ಯಾಯದಲ್ಲಿ ಯೇಸುವಿನ ಬರುವಿಕೆಯಿಂದ ಆಗುತ್ತದೆ. ಪೌಲನು ತನ್ನ ಪತ್ರಿಕೆಯನ್ನು ಯೇಸುವು ಬರುತ್ತಾನೆ ತಡಮಾಡುವುದಿಲ್ಲ ಎಂಬುದರೊಂದಿಗೆ ಆರಂಭಿಸುತ್ತಾನೆ (ಇಬ್ರಿಯ 10:37) ಮತ್ತು ಆತನು ನಮ್ಮ ನಂಬಿಕೆಯನ್ನು ಪೂರೈಸುವವನೂ ಆಗಿದ್ದಾನೆಂದು ಮುಕ್ತಾಯ ಮಾಡುತ್ತಾನೆ (ಇಬ್ರಿಯ 12:2). ಯೇಸುಕ್ರಿಸ್ತನು ನಮ್ಮಲ್ಲಿ ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿದ್ದಾನೆ. ಯೇಸುವೇ ನಂಬಿಕೆ ಇಡುವುದಕ್ಕೆ ಸಾಧ್ಯಗೊಳಿಸುತ್ತಾನೆ ಮತ್ತು ನಂಬಿಕೆಯ ಜೀವನವೆಂದರೆ ಏನೆಂಬುದಕ್ಕೆ ಮೂರ್ತರೂಪದಲ್ಲಿ ಉದಾಹರಣೆಯಾಗಿದ್ದಾನೆಂದು ಅರ್ಥಕೊಡುತ್ತದೆ. ಯೇಸುವಿನಿಂದ ನಂಬಿಕೆಯು ಪರಿಪೂರ್ಣವಾಗಿ ವ್ಯಕ್ತಪಡುತ್ತದೆ.

ಯೇಸುವು ನಮ್ಮ ನಂಬಿಕೆಯ ಸಂಸ್ಥಾಪಕನು (ಇಬ್ರಿಯ 12:2) ಅಥವಾ ಕರ್ತೃವು ಅಥವಾ ಮೊದಲಿಗನೆಂದು ಕನಿಷ್ಠ ಮೂರು ಅರ್ಥದಲ್ಲಿ ಹೇಳಬಹುದು. ಮೊದಲನೆಯದಾಗಿ ಆತನೊಬ್ಬನೇ ನಂಬಿಕೆಯ ಓಟವನ್ನು ಪೂರ್ಣಾರ್ಥದಲ್ಲಿ ಓಡಿಮುಗಿಸಿದವನಾಗಿದ್ದಾನೆ. ಹಿಂದಿನ ಅಧ್ಯಾಯದಲ್ಲಿ ಹೇಳಿರುವವರು ಅದರ ಗುರಿಯನ್ನು ಇನ್ನೂ ಪೂರ್ಣಗೊಳಿಸಿಲ್ಲ (ಮುಟ್ಟಿಲ್ಲ) (ಇಬ್ರಿಯ 11:39,40). ಹೇಗೂ ಯೇಸುಕ್ರಿಸ್ತನು ಪರಲೋಕದಲ್ಲಿ ದೇವರ ವಿಶ್ರಾಂತಿಯಲ್ಲಿ ಸೇರಿ ಆತನ ಬಲಗಡೆ ಆಸನಾರೂಢನಾಗಿದ್ದಾನೆ. ಇವರೊಟ್ಟಿಗೆ ನಾವು ಸೇರಿಕೊಂಡು ಯೇಸುವಿನೊಂದಿಗೆ ಪರಲೋಕದಲ್ಲಿ ಆಳುವವರಾಗುತ್ತೇವೆ (ಪ್ರಕ 20:4).

ಎರಡನೆಯದಾಗಿ ಯೇಸುವಿನ ಪರಿಪೂರ್ಣವಾದ ಜೀವನವು ತಾನೆ ನಿಜವಾಗಿ ಇತರರೂ ಸಹಾ ಓಟವನ್ನು ಓಡುವುದಕ್ಕೆ ಸಾಧ್ಯವಾಗಿಸಿದೆ (ಇಬ್ರಿಯ 10:5–14). ಯೇಸುವು ಬರದೇ ಹೋಗಿದ್ದರೆ ನಮ್ಮ ಪ್ರತಿಯೊಬ್ಬರ ಓಟವೂ ವ್ಯರ್ಥವಾಗುತ್ತಿತ್ತು.

ಕಡೆಯದಾಗಿ ಯೇಸುವಿನ ಕಾರಣದಿಂದ ನಮ್ಮಲ್ಲಿ ನಂಬಿಕೆ ಇದೆ. ದೇವರಲ್ಲಿ ಒಂದಾಗಿರುವವನಾಗಿ ಆತನು ದೇವರ ನಂಬಿಗಸ್ತಿಕೆಯನ್ನು ನಮ್ಮೆಡೆಗೆ ತೋರಿಸಿದ್ದಾನೆ. ದೇವರು ನಮ್ಮನ್ನು ರಕ್ಷಿಸುವ ತನ್ನ ಕೆಲಸವನ್ನು ಎಂದಿಗೂ ನಿಲ್ಲಿಸಿಬಿಡುವುದಿಲ್ಲ. ಆದುದರಿಂದ ನಾವು ಬಿಡದೆ ಹೋದರೆ ಅಂತ್ಯದಲ್ಲಿ ಪ್ರತಿಫಲವನ್ನು ಪಡೆಯುತ್ತೇವೆ. ನಾವು ಅಪನಂಬಿಗಸ್ತರಾಗಿದ್ದಾಗ್ಯೂ ಆತನು ಮಾತ್ರ ನಂಬಿಗಸ್ತನಾಗಿ ತಾಳ್ಮೆಯಿಂದ ಓಟವನ್ನು ಓಡಿದ್ದಾನೆ (2 ತಿಮೊಥೆ 2:13). ನಮ್ಮ ನಂಬಿಕೆಯು ಮಾತ್ರವೇ ಆತನ ನಂಬಿಗಸ್ತಿಕೆಗೆ ನಾವು ಕೊಡುವ (ಉತ್ತರ) ಪ್ರತಿಕ್ರಿಯೆಯಾಗಿದೆ.

ಕಟ್ಟಕಡೆಯದಾಗಿ ಯೇಸುವು ನಮ್ಮ ನಂಬಿಕೆಯನ್ನು ಪೂರೈಸುವವನು ಆಗಿದ್ದಾನೆ. ಯಾಕೆಂದರೆ ನಂಬಿಕೆಯ ಓಟವನ್ನು ಓಡುವುದಕ್ಕೆ ಪರಿಪೂರ್ಣವಾದ ಉದಾಹರಣೆಯಾಗಿದ್ದಾನೆ. ಆತನು ಹೇಗೆ ಓಡಿದನು? ಆತನು ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನ್ನು ತೆಗೆದುಹಾಕಿ ತನ್ನನ್ನು ತಾನು ದಾಸನನ್ನಾಗಿ ಮಾಡಿಕೊಂಡನು (ಫಿಲಿಪ್ಪಿ 2:5–8). ಆತನು ಎಂದಿಗೂ ಪಾಪವನ್ನು ಮಾದಲೇ ಇಲ್ಲ. ಯೇಸುವು ನಮ್ಮನ್ನು ತನ್ನ ಕೃಪೆಯಿಂದ ವಿಮೋಚಿಸುವ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯ ಮಾಡಿದನು. ಹಾಗಾಗಿ ಆತನು ನಿಂದೆಯನ್ನು ಮನುಷ್ಯರ ತಪ್ಪು ತಿಳುವಳಿಕೆಯನ್ನು ತಾಳಿಕೊಂಡು ಶಿಲುಬೆಯ ಮರಣದ ಅವಮಾನವನ್ನು ಅಲಕ್ಷ್ಯ ಮಾಡಿದನು (ಇಬ್ರಿಯ 12:2,3).

ಈವಾಗ ಓಟವನ್ನು ಓಡುವ ಸರದಿಯು ನಮ್ಮದಾಗಿದೆ. ನಾವು ನಮ್ಮ ಸ್ವಂತ ಶಕ್ತಿಯಿಂದ ಯೇಸುವು ಸಾಧಿಸಿದುದನ್ನು ಸಾಧಿಸಲಾರೆವಾದರೂ ನಮ್ಮ ಮುಂದೆ ಆತನ ಉದಾಹರಣೆ ಇಡಲ್ಪಟ್ಟಿದೆ. ಆದುದರಿಂದ ನಮ್ಮ ದೃಷ್ಟಿಯನ್ನು ಆತನ ಮೇಲೆ ಇಟ್ಟು ನಂಬಿಕೆಯಿಂದ ಮಹಾಪ್ರತಿಫಲದ ವಾಗ್ದಾನದ ಮೇಲೆ ಭರವಸೆ ಇಟ್ಟು ಮುಂದೆ ಸಾಗೋಣ.

**ಶುಕ್ರವಾರ** **ಮಾರ್ಚ್ 11**

**ಹೆಚ್ಚಿನ ಚಿಂತನೆ :** "ನಂಬಿಕೆಯಿಂದ ನೀನು ಕ್ರಿಸ್ತನವನಾಗಿದ್ದಿಯೆ, ನಂಬಿಕೆಯನ್ನು ಕೊಡುತ್ತಾ ತೆಗೆದುಕೊಳ್ಳುತ್ತಾ ಆತನಲ್ಲಿ ನೀನು ಬೆಳೆಯಬೇಕು. ನೀನು ನಿನ್ನದೆಲ್ಲವನ್ನೂ ಆತನಿಗೆ ಕೊಡಬೇಕು. ನಿನ್ನ ಹೃದಯ, ನಿನ್ನ ಮನಸ್ಸು, ನಿನ್ನ ಸೇವೆ ಆತನ ಅಗತ್ಯಗಳನ್ನು ಪೂರೈಸಲು ನಿನ್ನನ್ನೇ ನೀನು ಆತನಿಗೆ ಕೊಟ್ಟು ಬಿಡಬೇಕು. ಹಾಗೆಯೇ

ನೀನು ಸಹಾ ಆತನಿಂದ ಎಲ್ಲವನ್ನೂ ತೆಗೆದುಕೊಳ್ಳಬೇಕು. ಆತನ ಆಶೀರ್ವಾದಗಳ ಪರಿಪೂರ್ಣತೆಯನ್ನು, ನಿನ್ನ ಹೃದಯದಲ್ಲ ವಾಸಿಸಲು ನಿನ್ನ ಬಲವಾಗಿರಲು, ನಿನ್ನ ನೀತಿಯಾಗಿರಲು, ನಿನ್ನ ನಿತ್ಯ ಸಹಾಯಕನಾಗಿರಲು ವಿಧೇಯತೆಯ ಶಕ್ತಿಯನ್ನು ಆತನಿಂದ ತೆಗೆದುಕೊಳ್ಳಬೇಕು" ಎಲೆನ್ ಜಿ ವೈಟಮ್ಮನವರ ಸ್ಟೆಪ್ಸ್ ಟು ಕ್ರೈಸ್ಟ್ ಪುಸ್ತಕದಲ್ಲಿ 70ನೇ ಪುಟ.

ನಮ್ಮ ನಂಬಿಕೆಗೆ ಆಧಾರವಾಗಿರುವ ತಕ್ಕ ಪುರಾವೆಯನ್ನು ನೀಡದೆ ತನ್ನನ್ನು ನಂಬುವಂತೆ ದೇವರು ನಮ್ಮನ್ನು ಎಂದಿಗೂ ಕೇಳುವುದಿಲ್ಲ. ಆತನ ಅಸ್ತಿತ್ವ, ಆತನ ಗುಣಸ್ವಭಾವ, ಆತನ ವಾಕ್ಯದ ಸತ್ಯತೆ ಇವುಗಳೆಲ್ಲವನ್ನು ನಮ್ಮ ವಿವೇಚನೆಗೆ ಒಪ್ಪುವಂಥ ರೀತಿಯಲ್ಲಿ ಸಾಕ್ಷ್ಯವನ್ನು ಕೊಟ್ಟು ಸ್ಥಾಪಿಸುವವನಾಗಿದ್ದಾನೆ, ಮತ್ತು ಈ ಸಾಕ್ಷ್ಯವು ಅಪಾರವಾಗಿದೆ. ಆದಾಗ್ಯೂ ದೇವರು ಸಂದೇಹಪಡುವ ಸಾಧ್ಯತೆಯನ್ನು ಎಂದೆಂದಿಗೂ ತೆಗೆದುಹಾಕಿ ಬಿಡುವುದಿಲ್ಲ. ನಮ್ಮ ನಂಬಿಕೆಯು ಸಾಕ್ಷ್ಯಾಧಾರರಾದ ಮೇಲೆ ನೆಲೆಗೊಳ್ಳಬೇಕಲ್ಲದೆ ಪ್ರಾತ್ಯಕ್ಷಿಕೆಯ ಮೇಲೆ ನೆಲೆಗೊಳ್ಳಬಾರದು. ಯಾರು ಸಂದೇಹವನ್ನು ವ್ಯಕ್ತಪಡಿಸುತ್ತಾರೋ ಅವರಿಗೆ ಸಾಕಷ್ಟು ಅವಕಾಶಗಳಿವೆ, ಮತ್ತೆ ಯಾರ್‍ಯಾರು ಸತ್ಯವನ್ನು ಅರಿಯಬೇಕೆಂಬ ಬಯಕೆಯನ್ನು ಹೊಂದಿರುತ್ತಾರೋ ಅವರು ನಂಬಿಕೆಗೆ ಅರ್ಹವಾದ ಅನೇಕ ಸಾಕ್ಷ್ಯವನ್ನು ಕಂಡುಕೊಳ್ಳುತ್ತಾರೆ.

"ಪರಿಮಿತಿಯುಳ್ಳ ನಮ್ಮ ಬುದ್ಧಿಶಕ್ತಿಯಿಂದ ಅಪರಿಮಿತನಾದ ದೇವರ ಗುಣಸ್ವಭಾವವನ್ನು ಮತ್ತು ಆತನ ಕೆಲಸಗಳನ್ನು ಸಂಪೂರ್ಣವಾಗಿ ಗ್ರಹಿಸಿಕೊಳ್ಳಲು ಸಾಧ್ಯವಿಲ್ಲ. ಅತಿ ಸೂಕ್ಷ್ಮತೆಯುಳ್ಳ ಬುದ್ಧಿಜೀವಿಗೆ, ಬಹಳ ಉನ್ನತವಾದ ಶಿಕ್ಷಣವನ್ನು ಪಡೆದಾತನಿಗೆ ಪರಿಶುದ್ಧನಾದ ದೇವರು ರಹಸ್ಯದ ಮುಸುಕಿನೊಳಗುಳಿದು ಬಿಡುತ್ತಾನೆ. ದೇವರನ್ನು ನೀನು ಹುಡುಕಿ ಕಂಡುಕೊಳ್ಳಬಲ್ಲೆಯಾ? ಸರ್ವಶಕ್ತನನ್ನು ಪರಿಪೂರ್ಣವಾಗಿ ನೀನು ಕಂಡುಕೊಳ್ಳಲು ಸಾಧ್ಯವೇ? ಅದು ಆಕಾಶದಷ್ಟು ಉನ್ನತವಾಗಿದೆ; ನೀನು ಮಾಡುವುದೇನು? ಪಾತಾಳಕ್ಕಿಂತ ಆಳವಾಗಿದೆ; ನೀನು ತಿಳಿದುಕೊಳ್ಳುವುದೇನು? ಎಂಬುದಾಗಿ ಯೋಬನು ಹೇಳುತ್ತಾನೆ. ಯೋಬ 11:7,8" ಎಲೆನ್ ಜಿ ವೈಟಮ್ಮನವರ ಸ್ಟೆಪ್ಸ್ ಟು ಕ್ರೈಸ್ಟ್ ಪುಸ್ತಕದಲ್ಲಿ 105ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಹಿಂದಿನ ಕಾಲದ ಕ್ರೈಸ್ತ ಪಂಡಿತರು ಹೀಗೆ ಬರೆಯುತ್ತಾರೆ. "ಕ್ರೆಡೊ ಅಟ್ ಇಂಟೆಲಿಜೆಮ್ "Credo ut intelligam" ಎಂಬ ಲ್ಯಾಟಿನ್ ವಾಕ್ಯವು ನಾನು ನಂಬುತ್ತೇನಾದ್ದರಿಂದ ತಿಳಿದುಕೊಳ್ಳಬಹುದು" ಎಂಬ ಅರ್ಥವನ್ನು ಕೊಡುತ್ತದೆ. ಇಬ್ರಿಯ 11:3ನೇ ವಚನವು "ನಂಬಿಕೆಯಿಂದ ನಾವು ತಿಳಿದುಕೊಳ್ಳುತ್ತೇವೆ" ಎಂದು ಹೇಳುತ್ತದೆ. ನಂಬಿಕೆಗೂ ತಿಳುವಳಿಕೆಗೂ ಏನು ಸಂಬಂಧವಿದೆ? ನಂಬಿಕೆಯು ತಿಳುವಳಿಕೆಗೆ ಮೊದಲು ಬರುತ್ತದೆ ಏಕೆ? ನಮಗೆ ತಿಳುವಳಿಕೆ ಇಲ್ಲದಾಗ್ಯೂ ಮೊದಲಿಗೆ ನಾವು ನಂಬಿಕೆಯಿಂದ ಆರಂಭಿಸಬೇಕು. ನಂತರ ನಮಗೆ ತಿಳುವಳಿಕೆ ಬರುತ್ತದೆ ಏಕೆ?

2. ಪಿಸ್ಟಿಸ್ ಎಂಬ ಗ್ರೀಕ್ ಪದವು ನಂಬಿಕೆ ಮತ್ತು ನಂಬಿಗಸ್ತಿಕೆ ಎಂಬ ಎರಡೂ ಅರ್ಥಗಳನ್ನು ಒಳಗೊಂಡಿದೆ. ನಂಬಿಕೆಯಿಂದಲೇ ಜೀವನ ಎಂಬುದರ ಅರ್ಥವನ್ನು ಹುಡುಕುವಾಗ ಎರಡೂ ಅರ್ಥಗಳು ಮುಖ್ಯವಾಗಿದೆ ಏಕೆ? ಇಬ್ರಿಯ 11ನೇ ಅಧ್ಯಾಯದ ಜನರು ತಮ್ಮ ನಂಬಿಗಸ್ತಿಕೆಯಿಂದ ತಮ್ಮ ನಂಬಿಕೆಯನ್ನು ವಾಸ್ತವವಾಗಿ ತೋರಿಸಿದರು ಹೇಗೆ? ನಾವು ಕೂಡ ಹೇಗೆ ಅದನ್ನೇ ಮಾಡಬಲ್ಲೆವು?

3. ನಂಬಿಕೆಯು ದೇವರು ನೀಡುವ ವರವೆಂದು ನಾವು ಅರಿತಿದ್ದಾಗ್ಯೂ (ರೋಮ 12:3) ಇದನ್ನು ಹೊಂದುವುದಕ್ಕೂ ನಿರ್ವಹಿಸುವುದಕ್ಕೂ ನಾವು ಯಾವ ಪಾತ್ರವನ್ನು ವಹಿಸಬೇಕು?